ಒ.ಎಸ್. ನಂ.67/2018
ಡಿಡಬ್ಲು-1

ದಿನಾಂಕ 27.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟಿ ಸವಾಲುಃ ವಾದಿ ಪರ ವಕೀಲರಿಂದಃ</u>

ರದ್ದತಿ ಪತ್ರದ ಪ್ರಕಾರ ದಾವಾ ಸ್ವತ್ತಿನ ಪಹಣಿಯ ಕಾಲಂ ನಂ.11 ರಿಂದ ಋಣ ಭಾರವನ್ನು ತೆಗೆಯಲು ತಹಸೀಲ್ದಾರವರಿಗೆ ಅರ್ಜಿ ನೀಡಿದ್ದೀರಾ ಎಂದರೆ ನೀಡಿಲ್ಲ ಎಂದು ಹೇಳುತ್ತಾರೆ. ರದ್ದತಿ ಪತ್ರದ ಪ್ರಕಾರ ದಾವಾ ಸ್ವತ್ತಿನ ಪಹಣಿಯ ಕಾಲಂ ನಂ.11 ರಿಂದ ಋಣ ಭಾರವನ್ನು ತೆಗೆಯಲು ನಿಮಗೆ ಏನಾದರೂ ತೊಂದರೆ ಇತ್ತಾ ಎಂದರೆ ಸಾಕ್ಷಿ ಮೊದಲು ಅರ್ಜಿ ಕೊಟ್ಟರೂ ತೆಗೆದಿಲ್ಲ ಎದಯಿ ಹೇಳುತ್ತಾರೆ. ಸದರಿ ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ರದ್ದತಿ ಪತ್ರವಾದ 2-ವರ್ಷಗಳ ನಂತರ ನಾನು ಪಹಣಿಯನ್ನು ನೋಡಿರುತ್ತೇನೆ. ರದ್ದತಿ ಪತ್ರದ ಪ್ರಕಾರ ದಾವಾ ಸ್ವತ್ತಿನ ಪಹಣಿಯ ಕಾಲಂ ನಂ.11 ರಿಂದ ಋಣ ಭಾರವನ್ನು ತೆಗೆಯದ ಬಗ್ಗೆ ನಾನು ತಹಸೀಲ್ದಾರರವರ ಯಾವುದೆ ಮೇಲ್ಮನವಿ ಸಲ್ಲಿಸಿಲ್ಲ.

ಸರ್ವೆ ನಂ.19 ಸುಮಾರು 1989 ರಿಂದ 15-ಎಕರೆ ಜಮೀನು ನನ್ನ ತಾಯಿ ನನ್ನ ಹೆಸರಿಗೆ ಮಾಡಿದ್ದು ಮತ್ತು ಪಹಣಿ ನನ್ನ ಹೆಸರಿನಲ್ಲಿವೆ ಎಂದರೆ ಸರಿ. ಅಂದಿನಿಂದಲೂ ಇಲ್ಲಿಯವರೆಗೂ ಸದರಿ ಜಮೀನಿಗೆ ನಾನೆ ಮಾಲಿಕ ಮತ್ತು ಕಬ್ಜೆದಾರನಿರುತ್ತೇನೆ ಎಂದರೆ ಸರಿ. ದಾವಾಸ್ತಿಯ ದಾವೆಯನ್ನು ಹೊರತುಪಡಿಸಿ ಬೇರೆ ಯಾವುದೆ ದಾವೆಗಳಿರುದಿಲ್ಲ ಎಂದರೆ ಸರಿ. ನನ್ನ ವಕೀಲರಿಗೆ ದಾವಾಸ್ತಿಯ ಮೇಲೆ ಕೇಸು ಇಲ್ಲ ಎಂದರೆ ಸಾಕ್ಷಿ ಮೊದಲು ಕೇಸು ಇರುವುದಿಲ್ಲ ಆದ್ದರಿಂದ ಹೇಳಿರುವುದಿಲ್ಲ ಎಂದು ಹೇಳುತ್ತಾರೆ.

ರದ್ದತಿ ಪತ್ರವನ್ನು ಮಾಡುವ ಸಮಯದಲ್ಲಿ ಯಾವುದೆ ಸಾಕ್ಷಿದಾರರು ಇರಲಿಲ್ಲ. ಅಡಮಾನ ಪತ್ರ ಮತ್ತು ರದ್ದತಿ ಪತ್ರ ಮಾಡುವಾಗ ಯಾವುದೆ ಸಾಕ್ಷಿದಾರರು ಇರಲಿಲ್ಲ. ರದ್ದತಿ ಪತ್ರ ಮಾಡುವ ಸಮಯದಲ್ಲಿ ಈರಪ್ಪ ತಂದೆ ತಮ್ಮಣ್ಣ ಸಿಂಗನಳ್ಳಿ ಎಂಬ ಸಾಕ್ಷಿದಾರರು ಇದ್ದರು ಎಂದರೆ ಸಾಕ್ಷಿ ನಾನು ಅವರನ್ನು ನೋಡಿಲ್ಲ ಎಂದು ಹೇಳುತ್ತಾರೆ. ಅದೇ ರೀತಿ ಶಂಕ್ರಪ್ಪ ತಂದೆ ಗೌಡಪ್ಪ ಹೊಸಮನಿರವರು ಇದ್ದರು ಎಂದರೆ ಸಾಕ್ಷಿ ನಾನು ಅವರನ್ನು ನೋಡಿಲ್ಲ ಎಂದು ಹೇಳುತ್ತಾರೆ. ಅಡಮಾನ ಪತ್ರ ಮಾಡುವ ಸಮಯದಲ್ಲೂ ಸಹ ಸದರಿ ಸಾಕ್ಷಿದಾರರು ಇದ್ದರು ಎಂದರೆ ಸರಿಯಲ್ಲ.

ಖರೀದಿ ಕರಾರು ಪತ್ರ ಮಾಡುವ ಸಮಯದಲ್ಲಿ ನನ್ನ ಹೆಂಡತಿ, ಜಗನ್ನಾಥರೆಡ್ಡಿ ತಂದೆ ನಾಗರೆಡ್ಡೆಪ್ಪ, ಈರಪ್ಪ ತಂದೆ ತಮ್ಮಣ್ಣರವರು ಇದ್ದರು ಎಂದರೆ ಸರಿಯಲ್ಲ. ನಿಪಿ-1 ಖರೀದಿ ಕಾರು ಪತ್ರದ ಮೇಲೆ ನನ್ನ ಸಹಿ ಇದೆ ಎಂದರೆ ಸರಿ. ದಿನಾಂಕ 23.07.2015 ರಂದು ವಾದಿಗೆ ನೊಂದಾಯಿತ ಖರೀದಿ ಕರಾರು ಪತ್ರ ಮಾಡಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ದಾವಾಸ್ತಿಯನ್ನು ರೂ.4,70,000/- ಗಳಿಗೆ ಖರೀದಿ ಕರಾರು ಪತ್ರ ಬರೆದು ಮುಂಗಡವಾಗಿ ರೂ.4,60,000/- ಪಡೆದಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಉಳಿದ ರೂ.10,000/- ಗಳನ್ನು Form No.10 ಮತ್ತು 11E ಆದ ನಂತರ ನೊಂದಾಯಿತು ಖರೀದಿ ಪತ್ರ ಮಾಡಿಕೊಡಲು ನಾನು ಒಪ್ಪಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ವಾದಿಗೆ ದಾವಾಸ್ತಿ ಕೊಡಬಾರದೆಂಬ ಉದ್ದೇಶದಿಂದ ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಜೇವರ್ಗಿ